**ಅತಿ ಪ್ರಾಮುಖ್ಯ**

**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

**ಅತಿ ಜರೂರು**

ದೂರವಾಣಿ:080–22343904, 22343905.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು – 560 001.

ಸಂಖ್ಯೆ: ಕಾಶಿಇ/ಶೈವಿ/50/ವಿಜ್ಞಾನ ಅನುದಾನ/2016–17

ದಿನಾಂಕ:17.07.2017

# ಸುತ್ತೋಲೆ

ವಿಷಯ: 2016–17ನೇ ಸಾಲಿನಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳ ಅಭಿವೃದ್ಧಿಗಾಗಿ ಪ್ರಯೋಗಾಲಯಗಳಿಗೆ ಅಗತ್ಯವಿರುವ ಉಪಕರಣಗಳು, ರಾಸಾಯನಿಕ/ಕನ್ಸುಮಬಲ್ಸ್, ಗ್ರಂಥಾಲಯ ಪುಸ್ತಕ ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಬಿಡುಗಡೆ ಮಾಡಲಾದ ಅನುದಾನದ ಬಳಕೆಯ ಬಗ್ಗೆ ***"ಹಣ ಬಳಕೆಯ ಪ್ರಮಾಣ ಪತ್ರ"***ವನ್ನು ಸಲ್ಲಿಸುವ ಕುರಿತು.

ಉಲ್ಲೇಖ: ಈ ಕಛೇರಿಯ ದಿನಾಂಕ:27.09.2016 & 28.12.2016 ಹಾಗೂ ದಿನಾಂಕ:06.03.2017ರ ಅನುದಾನ ಬಿಡುಗಡೆ ಆದೇಶ ಸಂಖ್ಯೆ: ಕಾಶಿಇ/ಶೈವಿ/50/ವಿಜ್ಞಾನ ಅನುದಾನ/2016–17.

* * * * * *

2016–17ನೇ ಸಾಲಿನಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳನ್ನು ಹೊಂದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಉಲ್ಲೇಖಿತ ಈ ಕಛೇರಿ ಆದೇಶಗಳಲ್ಲಿ ಪ್ರಯೋಗಾಲಯಗಳಿಗೆ ಉಪಕರಣಗಳು, ರಾಸಾಯನಿಕ/ಕನ್ಸುಮಬಲ್ಸ್, ಗ್ರಂಥಾಲಯ ಪುಸ್ತಕ ಹಾಗೂ ಪೀಠೋಪಕರಣಗಳನ್ನು ಒದಗಿಸಿಕೊಳ್ಳಲು ***ಲೆಕ್ಕ ಶೀರ್ಷಿಕೆ: 2202-03-103-2-04-059*** ರಡಿಯಲ್ಲಿ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಈ ಅನುದಾನವನ್ನು ನಿಗಧಿಪಡಿಸಿದ ಉದ್ದೇಶಗಳಿಗೆ ಬಳಕೆ ಮಾಡಿ, **"ಹಣ ಬಳಕೆಯ ಪ್ರಮಾಣ ಪತ್ರ"**ವನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ ಇಂದಿನವರೆಗೂ ಹಣ ಬಳಕೆಯ ಪ್ರಮಾಣ ಪತ್ರಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ.

***ಮಹಾಲೇಖಾಪಾಲರು ದಿನಾಂಕ:13.07.2017 ರಿಂದ ಕೇಂದ್ರ ಕಛೇರಿಯಲ್ಲಿ ಲೆಕ್ಕ ತಪಾಸಣೆಯನ್ನು ಹಮ್ಮಿಕೊಂಡಿದ್ದು, ಹಣ ಬಳಕೆ ಪ್ರಮಾಣ ಪತ್ರಗಳನ್ನು ಅಪೇಕ್ಷಿಸಿರುತ್ತಾರೆ. ಆದುದರಿಂದ ಪ್ರಾಂಶುಪಾಲರು ಈ ಬಗ್ಗೆ ವೈಯಕ್ತಿಕ ಗಮನಹರಿಸಿ, ಉಲ್ಲೇಖಿತ ಈ ಕಛೇರಿಯ ಅನುದಾನ ಬಿಡುಗಡೆ ಆದೇಶಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ಬಳಕೆಯ ಬಗ್ಗೆ ನಿಗದಿತ ನಮೂನೆಯಲ್ಲಿ "ಹಣ ಬಳಕೆಯ ಪ್ರಮಾಣ ಪತ್ರ"ವನ್ನು ಅತ್ಯಂತ ತುರ್ತಾಗಿ ಇಂದೇ ಇ–ಮೇಲ್ ವಿಳಾಸ dce.academic@gmail.com ಗೆ (pdf or jpg format ನಲ್ಲಿ) ಕಳುಹಿಸುವಂತೆ ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಮುಂದಿನ ಆಗು–ಹೋಗುಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.***

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

1) ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲಬರ್ಗ. **–ಕೂಡಲೇ ಅಗತ್ಯ ಕ್ರಮಕ್ಕಾಗಿ.**
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು–ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ.
4) ಕಛೇರಿ ಪ್ರತಿ.